ಮಾಡಲಾಗಿದೆ. ಇದರ ಪೈಕಿ 93-94 ಮತ್ತು 94-95ನೇ ಸಾಲಿನಲ್ಲಿ ಒಟ್ಟು 309 ಆಶ್ರಯ ಮನೆಗಳನ್ನು ಕಟ್ಟಲಾಗಿದೆ.

ಅ)

ವರ್ಷ		ಗ್ರಾಮ	ನಿವೇಶನ ವಿತರಣೆ ಸಂಖ್ಯೆ	ವರ್ಷ	ಮನೆ ನಿರ್ಮಾಣ ಸಂಖ್ಯೆ	ವಿತರಣೆ ಸಂಖ್ಯೆ
1.	1992-93	ಅಮರಗೋಳ	678	93-94	-	-
2.	1992-93	ಸತ್ತೂರ್	417	94-95	80	ಪೂರ್ಣಗೊಂಡ
				94-95	85	309
3.	1992-93	ನವಲೂರ್	105	94-95	(26 ಮನೆ ಪ್ಲಿಂತ ಮಟ್ಟ)	ಮನೆಗಳನ್ನು ವಿತರಣೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ
4.	1992-93	ಗೋಕುಲ	-	94-95	144 ಮನೆ ಮುಗಿದಿರುತ್ತದೆ)	
				94-95	57 ಮನೆ ಪ್ಲಿಂತ	
5.	1994-95	ಬಮ್ಮಾಪುರ	-	94-95	15 "	
6.	1994-95	ಉಣಕಲ್	-	94-95	50 "	
7.	1994Ë95	ಗೋಪನ ಕೊಪ್ಪ	-	94Ë95	30 "	

ಇ) 1. ಅಮರಗೋಳ 678 ಮನೆ ಕಟ್ಟಿಲ್ಲ

2. ಸತ್ತೂರ 252 "

3. ನವಲೂರು 105 "

4. ಗೋಕುಲ ನಿವೇಶನ ಮತ್ತು ಮನೆಗಳನ್ನು ವಿತರಣೆ ಮಾಡಿಲ್ಲ

5. ಅಮ್ಮಾಪ್ಪುರ "

6. ಉಣಕಲ್ "

7. ಗೋಪನಕೊಪ್ಪ "

ಮುದ್ದುರೇಶ್ವರ ಪುಡ್ಸ್ ಮತ್ತು ಆಗ್ರೋ ಪ್ರಾಡಕ್ಟ್ಸನವರಿಗೆ ಆಕ್ಸುಕಲ್ಚರ್‌ಗಾಗಿ ಜಮೀನು ಮಂಜೂರು

439 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುದ್ದುರೇಶ್ವರ ಪುಡ್ಸ್ ಮತ್ತು ಆಗ್ರೋ ಪ್ರಾಡಕ್ಟ್ಸನವರಿಗೆ ಆಕ್ಸುಕಲ್ಚರ್‌ಗಾಗಿ ಕಾರವಾರದಲ್ಲಿ ಜಮೀನು ಮಂಜೂರು ಮಾಡಲಾಗಿದೆಯೇ ಮತ್ತು ಯಾವಾಗ?

ಆ) ಹಾಗಿದ್ದಲ್ಲಿ ಯಾವ ಬೆಲೆಗೆ ಮಂಜೂರು ಮಾಡಲಾಗಿದೆ.

ಇ) ಈ ಮುಂಚೆ ಜಮೀನನ್ನು ಯಾರಿಗೆ ಮಂಜೂರು ಮಾಡಲಾಗಿತ್ತು ಮತ್ತು ಯಾವ ಬೆಲೆಗೆ.

ಈ) ಒಂದು ಸಾರಿ ಒಬ್ಬರಿಗೆ ಮಂಜೂರು ಮಾಡಿದ ಮೇಲೆ ಇನ್ನೊಬ್ಬರಿಗೆ ಜಮೀನು ಮಂಜೂರು ಮಾಡಲು ಸಾಧ್ಯವೆ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ) ಮುದ್ದುರೇಶ್ವರ ಪುಡ್ಸ್ ಮತ್ತು ಎಕ್ಸ್‌ಪೋರ್ಟ್ ಲಿಮಿಟೆಡ್‌ರವರಿಗೆ ಕಾರವಾರ ಜಿಲ್ಲೆಯ ಕುಮಟ ಮತ್ತು ಆಂಕೋಲ ತಾಲ್ಲೂಕುಗಳಲ್ಲಿ 1818 ಎಕರೆ 16 ಗುಂಟೆ 8 ಆಣೆ ಜಮೀನನ್ನು ದಿನಾಂಕ 23.6.94ರಲ್ಲಿ ಮಂಜೂರು ಮಾಡಲಾಗಿದೆ.

ಆ) ಮೇಲ್ಕಾಣಿಸಿದ ಜಮೀನಿಗೆ ವಿಧಿಸಿರುವ ತಾತ್ಕಾಲಿಕ ಬೆಲೆಯು 54.94 ಲಕ್ಷ ರೂ. ಆಗಿರುತ್ತದೆ.

ಇ) ಇದಕ್ಕೆ ಮುಂಚೆ ಬಳ್ಳಾರ್‌ಪುರ್ ಇಂಡಸ್ಟ್ರೀಸ್ ಲಿಮಿಟೆಡ್‌ರವರಿಗೆ ಈ ಜಮೀನನ್ನು ಮಂಜೂರು ಮಾಡಲಾಗಿತ್ತು. ಮತ್ತು ಅದಕ್ಕೆ ಆ ಕಂಪನಿಯವರು ತಾತ್ಕಾಲಿಕ ದರದಲ್ಲಿ ಒಟ್ಟು 54.94 ಲಕ್ಷ ರೂ.ಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಲಿಗೆ ಪಾವತಿ ಮಾಡಿದ್ದರು.

ಈ) ಒಮ್ಮೆ ಮಂಜೂರಾದ ಭೂಮಿಯನ್ನು ಮಂಜೂರುದಾರರು ಕೈಗಾರಿಕೆಯನ್ನು ಸ್ಥಾಪಿಸಲು ತಪ್ಪಿದಲ್ಲಿ ಅಂತಹ ಭೂಮಿಯನ್ನು ಪುನರ್ ವಶಪಡಿಸಿಕೊಳ್ಳಲು ಮಂಡಳಿಯು ಅಧಿಕಾರವನ್ನು ಹೊಂದಿದೆ. ಕೈಗಾರಿಕೆಯ ಸ್ಥಾಪನೆಗೆ ನೀಡಿದ ಜಮೀನನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲು ಸಾಧ್ಯವಾಗದಿದ್ದಲ್ಲಿ ಮಂಜೂರುದಾರರು ಸ್ವತಃ ಸಂಪೂರ್ಣ ಭೂಮಿಯನ್ನು ಅಥವಾ ಉಪಯೋಗಿಸಲು ಸಾಧ್ಯವಾಗದ ಭಾಗಶಃ ಜಮೀನನ್ನು ಮಂಡಳಿಗೆ ಹಿಂದಿರುಗಿಸಲು ಅವಕಾಶವಿದೆಯೆಂದು ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ವರದಿ ಮಾಡಿದೆ. ಇಂತಹ ಜಮೀನನ್ನು ಬೇರೆಯವರಿಗೆ ಕೈಗಾರಿಕೆ ಸ್ಥಾಪನೆಗಾಗಿ ಮಂಜೂರು ಮಾಡಲು ಅವಕಾಶವಿದೆ. ವಿಷಯವು ಉಚ್ಚ ನ್ಯಾಯಾಲಯದ ಮುಂದೆಯೂ ಸಹ ರಿಟ್ ಅರ್ಜಿ ಸಂಖ್ಯೆ: 22831-22832:94 ರಲ್ಲಿರುತ್ತದೆ.

ಟೀ ನರಸೀಪುರ ತಾಲ್ಲೂಕಿನಲ್ಲಿ ಕೈಗಾರಿಕಾ ಎಸ್ಟೇಟ್‌ಗಳ ನಿರ್ಮಾಣ

1837 - ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಸಣ್ಣ ಪ್ರಮಾಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿನ ತಾಲ್ಲೂಕು ಕೇಂದ್ರಗಳಲ್ಲಿ ಕೈಗಾರಿಕಾ ಎಸ್ಟೇಟುಗಳನ್ನು ನಿರ್ಮಿಸಲಾಗಿರುವವುಗಳ ಸಂಖ್ಯೆ ಎಷ್ಟು?

ಆ) ಉಳಿದ ತಾಲ್ಲೂಕುಗಳಲ್ಲಿ ಕೈಗಾರಿಕಾ ಎಸ್ಟೇಟುಗಳನ್ನು ನಿರ್ಮಿಸಲು ಸರ್ಕಾರ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕ್ರಮಗಳೇನು?

ಇ) ಟೀ ನರಸೀಪುರ ತಾಲ್ಲೂಕಿನಲ್ಲಿ 1995-96ರಲ್ಲಿ ಕೈಗಾರಿಕಾ ಎಸ್ಟೇಟುಗಳನ್ನು ನಿರ್ಮಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ?

ಈ) ಹಾಗಿದ್ದಲ್ಲಿ, ಇದಕ್ಕಾಗಿ ವಿಚರ್ಚು ಮಾಡಲಿರುವ ಹಣದ ಪ್ರಮಾಣವೆಷ್ಟು?

ಶ್ರೀ ಎನ್.ಎಂ. ನಬಿ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

ಅ) 105 ಕೈಗಾರಿಕಾ ಎಸ್ಟೇಟುಗಳು

ಆ) ಉಳಿದ 24 ತಾಲ್ಲೂಕುಗಳಲ್ಲಿ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಲು ಭೂ ಸ್ವಾಧೀನತೆಯ ಕ್ರಮವು ಪ್ರಗತಿಯಲ್ಲಿದೆ.

ಇ) ಇಲ್ಲಾ